**OS.No. 166/2015**
**DW-1**

ದಿನಾಂಕ 06-12-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ಶ್ರೀ ಎಸ್ ಎ ಎಚ್ ವಕೀಲರಿಂದಃ</u>**

1. 2019 ನೇ ವರ್ಷದಲ್ಲಿ ದಾವಾ ಆಸ್ತಿಯ ವಹಿವಾಟಿಗೆ ವಾದಿಗೆ ತೊಂದರೆ ನೀಡಿದ್ದೇನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯು ದಾವಾ ಆಸ್ತಿಯ ವಹಿವಾಟಿಗೆ ನನಗೆ ತೊಂದರೆ ನೀಡಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ತೊಂದರೆ ನೀಡಿದ ವಿಚಾರವಾಗಿ ವಾದಿಯು ನನ್ನ ವಿರುದ್ದ ಆಡೂರ ಪೊಲೀಸ್ ಠಾಣೆಯಲ್ಲಿ ಮತ್ತು ಮಾನ್ಯ ಎಸ್ ಪಿ ಅವರ ಮುಂದೆ ಪಿರ್ಯಾದಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಅವರ ವಿರುದ್ದ ನಾನೇ ಸಲ್ಲಿಸಿದ್ದೇ ಎಂದು ನುಡಿಯುತ್ತಾರೆ. ನಾನು ನೀಡಿದ ಪಿರ್ಯಾದಿಯ ಆಧಾರದ ಮೇಲೆ ಸಂಬಂದಪಟ್ಟ ಪೊಲೀಸರು ವಾದಿಗೆ ಠಾಣೆಗೆ ಹಾಜರಾಗು ಎಂದು ಸಾಕಷ್ಟು ಬಾರಿ ನೋಟಿಸು ನೀಡಿದರೂ ಹಾಜರು ಆಗದೇ ಇರುವ ಕಾರಣದಿಂದ ಪೋಲೀಸರು ತಹಶೀಲ್ದಾರ ಅವರ ಹತ್ತಿರ ಪರಿಹಾರ ಪಡೆಯುವಂತೆ ನನ್ನನ್ನು ಕಳಿಸಿರುತ್ತಾರೆ. ನಾನು ವಾದಿಯ ವಿರುದ್ದ ನೀಡಿದ್ದ ಪಿರ್ಯಾದಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಾನು ನೀಡಿದ ಪಿರ್ಯಾದಿಯನ್ನು ಪೊಲೀಸರು ವಿಚಾರಿಸಿ ಸಿವಿಲ್ ದಾವೆಯ ಪ್ರಕರಣ ಇರುವುದರಿಂದ ನ್ಯಾಯಾಲಯಕ್ಕೆ ಮೊರೆ ಹೋಗುವಂತೆ ತಿಳಿಸಿರುತ್ತಾರೆ.

2. ನಾನು ಪೊಲೀಸರ ಮುಂದೆ ಒಂದು ಹೇಳಿಕೆಯನ್ನು ಬರೆದುಕೊಟ್ಟಿದ್ದು ಅದರಲ್ಲಿ ದಾವಾ ಆಸ್ತಿಯನ್ನು ವಾದಿಯು ವಹಿವಾಟು ಮಾಡಲು ತೊಂದರೆ ನೀಡುವುದಿಲ್ಲ ಎಂದು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ಆಡೂರ ಪೊಲೀಸ ಠಾಣೆಯಲ್ಲಿ ನನ್ನ ವಿರದ್ದ ನೀಡಿದ್ದ ಪಿರ್ಯಾದಿಯ ಮೇಲೆ ತಹಶೀಲ್ದಾರ ಅವರಿಗೆ ಒಂದು ಪತ್ರ ವ್ಯವಹಾರ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪಿರ್ಯಾದಿಯ ವಿಷಯವಾಗಿ ಮಾನ್ಯ ಸೂಪರ್ ಡೆಂಟ್ ಆಫ್ ಪೊಲೀಸ ಹಾವೇರಿ

ಅವರು ಸಹ ನನ್ನನ್ನು ಕರೆದು ವಿಚಾರಣೆ ಮಾಡಿ ದಾವಾ ಆಸ್ತಿಯನ್ನು ವಾದಿಯು ವಹಿವಾಟು ಮಾಡಲು ತೊಂದರೆ ನೀಡಬೇಡ ಎಂದು ನಿರ್ದೇಶನ ನೀಡ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವಿಚಾರಣೆಯಲ್ಲಿ ವಾದಿಯು ಹಾಜರಿದ್ದು ಇಬ್ಬರನ್ನು ಸಹ ವಿಚಾರಣೆ ಮಾಡಿದ್ದರು ಎಂದು ನುಡಿಯುತ್ತಾರೆ. ದಿಃ 10-05-2002 ರಂದು ಗ್ರಾಮದಲ್ಲಿ ಸಾಕ್ಷಿದಾರರ ಸಮ್ಮುಖ ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟು ಅಂದೇ ಸ್ವಾಧೀನವನ್ನು ವಾದಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರಿನ ಅಡಿಯಲ್ಲಿ ಒಟ್ಟು ಪ್ರತಿಫಲವಾಗಿ ಹಣವಾದ ರೂ. 32,500/- ಪೈಕಿ ವಾದಿಯಿಂದ ರೂ. 32,450/- ರೂಗಳನ್ನು ಮುಂಗಡವಾಗಿ ಪಡೆದಿದ್ದೇನೆ ಎಂದರೆ ಸರಿಯಲ್ಲ.

3. ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ವಾದಿಯು ನನಗೆ ವಕೀಲರ ಮುಖಾಂತರ ನೋಟಿಸನ್ನು ನೀಡಿದ್ದರು ಎಂದರೆ ಸರಿ. ಸದರಿ ನೋಟಿಸಗೆ ನಾನು ಉತ್ತರನ್ನು ನೀಡಿರುತ್ತೇನೆ. ಸದರಿ ನೋಟಿಸನಲ್ಲಿ ಮೊದಲಿಗೆ ವಾದಿಗೆ ನಾನು ಕ್ರಯ ಪತ್ರವನ್ನು ಬರೆದುಕೊಡುವುದಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸದರಿ ನೋಟಿಸನಲ್ಲಿ ನಾನು ಯಾವುದೇ ಕ್ರಯ ಪತ್ರದಲ್ಲಿ ಬರೆದುಕೊಟ್ಟಿರುವುದಿಲ್ಲ ಎಂದು ಉತ್ತರವನ್ನು ನೀಡಿರುತ್ತಾರೆ. ನಾನು ಸಾಕ್ಷಿದಾರರ ಸಮಕ್ಷಮ ವಾದಿಗೆ ಕ್ರಯದ ಕರಾರನ್ನು ಬರೆದುಕೊಟ್ಟಿದ್ದರೂ ಸಹ ಬುದ್ದಿಯ ಪೂರ್ವಕವಾಗಿ ಆತನಿಗೆ ಕ್ರಯದ ಕರಾರು ಬರೆದುಕೊಟ್ಟಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಂದಿಗೂ ಸಹ ದಾವಾ ಆಸ್ತಿಯನ್ನು ವಾದಿಯೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಸಾಗುವಳಿ ಮಾಡಿ ಅದರಿಂದ ಬಂದಂತಹ ಉತ್ಪನ್ನವನ್ನು ಸಂಬಂದಪಟ್ಟ ಸರಕಾರ ಸೌಮ್ಯದ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ ಬಗ್ಗೆ ರಶೀದಿಯನ್ನು ಹಾಜರು ಪಡಿಸಿದ್ದೀರಾ ಎಂಬ ಸೂಚನೆಗೆ ಸಾಕ್ಷಿ ನಾನು ಖಾಸಗಿಯವರ ಜೊತೆ ಉತ್ಪನ್ನಗಳನ್ನು ಮಾರಾಟ ಮಾಡಿದ್ದು, ಆದ್ದರಿಂದ ಅದರ ರಶೀದಿಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಖಾಸಗಿಯವರಿಗೆ ದಾವಾ ಆಸ್ತಿಯಲ್ಲಿ

ಬೆಳೆದ ಗೋವಿನಜೋಳ ಮತ್ತು ಅಲಸಂಧಿಯನ್ನು ಮಾರಾಟ ಮಾಡಿರುತ್ತೇನೆ. ಸದರಿ ವ್ಯಾಪಾರಸ್ಥರ ಹೆಸರುಗಳು ನನಗೆ ನೆನಪಿರುವುದಿಲ್ಲ. ಕ್ರಯದ ಕರಾರು ಪತ್ರದಲ್ಲಿರುವ ಸಹಿ ನನ್ನದೇ ಇದ್ದರೂ ಸಹ ದಾವಾ ಆಸ್ತಿಯನ್ನು ಉಳಿಸಿಕೊಳ್ಳುವ ಸಲುವಾಗಿ ವಾದಿಗೆ ಕ್ರಯದ ಕರಾರು ಬರೆದುಕೊಟ್ಟಿಲ್ಲ ಎಂದು ಮತ್ತು ಮುಂಗಡ ಹಣವನ್ನು ಪಡೆದುಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಕ್ರಯದ ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವ ಸುರೇಶ ಎಂಬ ವ್ಯಕ್ತಿಗೆ ನಾನು ನ್ಯಾಯಾಲಯದಲ್ಲಿ ಸಾಕ್ಷಿಯನ್ನು ನುಡಿಯದಂತೆ ಒತ್ತಡ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಸುರೇಶ ಎಂಬ ವ್ಯಕ್ತಿಯು ಗ್ರಾಮದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರತಿವಾದ ಪತ್ರ , ವಕಾಲತ್ , ಮಧ್ಯಂತರ ಅರ್ಜಿಗಳಿಗೆ ಸಲ್ಲಿಸಿರುವ ಪ್ರಮಾಣ ಪತ್ರಗಳಲ್ಲಿ ನನ್ನ ಸಹಿ ಎಂದು ತಿಳಿಯಬಾರದು ಎಂದು ಕೆಲವೊಂದರಲ್ಲಿ ಬೇರೆ ಬೇರೆ ರೀತಿಯಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕ್ರಯದ ಕರಾರು ಆದ ದಿನದಿಂದಲೂ ಪೋಡಿ ಮಾಡಿಕೊಳ್ಳದೇ ಇರುವುದರಿಂದ ಕ್ರಯ ಪತ್ರವನ್ನು ವಾದಿಯು ಬರೆಸಿಕೊಳ್ಳಲು ತಯಾರಿದ್ದರೂ ಸಹ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ವಾದಿಯ ಸ್ವಾಧೀನದಲ್ಲಿದ್ದು ವಹಿವಾಟು ಮಾಡಲು ತೊಂದರೆ ನೀಡಲು ನನಗೆ ಅಧಿಕಾರ ಇಲ್ಲ ಎಂದರೆ ದಾವಾ ಆಸ್ತಿಯು ನನ್ನ ಸ್ವಾಧೀನದಲ್ಲಿದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ನನ್ನ ಸ್ವಾಧೀನದಲ್ಲಿ ಇದ್ದಿದ್ದರೆ ಪೊಲೀಸರ ಬಳಿ ದಾವಾ ಆಸ್ತಿಯನ್ನು ವಾದಿಯು ವಹಿವಾಟು ಮಾಡಲು ತೊಂದರೆ ನೀಡುವುದಿಲ್ಲ ಎಂದು ಹೇಳಿಕೆ ಅಥವಾ ಹಿಂಬರಹವನ್ನು ಬರೆದುಕೊಡುತ್ತಿರಲಿಲ್ಲ ಎಂದರೆ ಸಾಕ್ಷಿಯು ಆ ರೀತಿ ನಾನು ಹೇಳಿಕೆ ಅಥವಾ ಹಿಂಬರಹವನ್ನು ಬರೆದುಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

5. ವಾದಿಯು ಸದಾ ಮತ್ತು ಇಂದಿಗೂ ಸಹ ಉಳಿಕೆ ಕ್ರಯದ ಹಣವಾದ ರೂ. 50 /- ನೀಡಿ ಕ್ರಯ ಪತ್ರವನ್ನು ಬರೆಸಿಕೊಳ್ಳಲು ತಯಾರಿದ್ದು, ನಾನು ಬಾಧ್ಯಸ್ಥಕೆಯಿಂದ ತಪ್ಪಿಸಿಕೊಳ್ಳಲು ಕ್ರಯ ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ